International Journal of Kannada Research
of
Kannada Research

International Journal of Kannada Research
www.kannadajournal.com

ISSN: 2454–5813
IJKR 2018; 4(1): 92-94
© 2018 IJKR
www.kannadajournal.com
Received: 15-11-2017
Accepted: 18-12-2017

**ಡಾ.ಬಾಳಪ್ಪ.ಎ.ಬಿ.**
ಕನ್ನಡ ಸಹ ಪ್ರಾಧ್ಯಾಪಕರು
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ಮಧುಗಿರಿ, ತುಮಕೂರು

**Correspondence**
**ಡಾ.ಬಾಳಪ್ಪ.ಎ.ಬಿ.**
ಕನ್ನಡ ಸಹ ಪ್ರಾಧ್ಯಾಪಕರು
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ಮಧುಗಿರಿ, ತುಮಕೂರು

# ಕರೀಗೌಡ ಬೀಚನಹಳ್ಳಿಯವರ–ಎಚ್.ಎಲ್.ನಾಗೇಗೌಡ ಕೃತಿ ವಿಶ್ಲೇಷಣಾ

**ಡಾ.ಬಾಳಪ್ಪ.ಎ.ಬಿ.**

ತುಮಕೂರು ಜಿಲ್ಲೆಯ ಸಾಹಿತ್ಯ ದಿಗ್ಗಜರ ನೆನಪು ಉಳಿಯುವಂತೆ ಮಾಡಿರುವ ಹಲವರಲ್ಲಿ ಕರೀಗೌಡ ಬೀಚನಹಳ್ಳಿಯವರೂ ಒಬ್ಬರು. ಕನ್ನಡ ಸಾಹಿತ್ಯ ಚರಿತ್ರೆಯ ಪುಟಗಳಲ್ಲಿ ಕಲ್ಪತರು ನಾಡಿನ ಹೆಜ್ಜೆ ಗುರುತುಗಳನ್ನು ಗುರುತಿಸುತ್ತ ನಿರಂತರ ಸಾಹಿತ್ಯ ಸುಗ್ಗಿ ಸಾಗುವಂತೆ ಮಾಡಿದವರಲ್ಲಿಯೂ ಕರೀಗೌಡ ಬೀಚನಹಳ್ಳಿಯವರ ಪಾತ್ರ ಅಲಕ್ಷಿಸುವಂತದ್ದೇನೂ ಅಲ್ಲ. ಎಲ್ಲ ಕಲೆ, ಸಾಹಿತ್ಯ, ಸಂಸ್ಕೃತಿಯ ಬೀಡಾಗಿರುವ ಈ ಕಲ್ಪತರು ನಾಡಿನಲ್ಲಿ ಗ್ರಾಮೀಣ ಪರಿಸರದಿಂದ ಬಂದ ಕರೀಗೌಡ ಬೀಚನಹಳ್ಳಿ ಬಹುಮುಖ ಪ್ರತಿಭೆಯ ಕತೆಗಾರರು.

ಡಾ.ಕರೀಗೌಡ ಬೀಚನಹಳ್ಳಿಯವರ ಇಪ್ಪತ್ತನೆಯ ಶತಮಾನದ ಉತ್ತರಾರ್ಧದ ನಿರ್ಧಿಷ್ಟ ಪರಿಸರದ ಬರಹದ ಬದುಕಿನ ಯಾನ ರೋಚಕವಾದುದು. ಒಳಗಿನ ಸಂಸ್ಕೃತಿಯ ತನ್ನತನ ಮತ್ತು ಹೊರಗಿನ ಸಂಸ್ಕೃತಿಯ ಅನ್ಯತನ ಇವುಗಳ ಸಂಘರ್ಷದಲ್ಲಿ ಕನ್ನಡದ ನುಡಿಗಟ್ಟುಗಳು, ರೂಢಿಗಳು, ದೇಸಿ ಜ್ಞಾನ ಪರಂಪರೆ, ರೂಕ್ಷ ಪ್ರತಿಮೆ, ಸೂಕ್ಷ್ಮ ಪ್ರತಿಮೆ ಇವೆಲ್ಲವುಗಳನ್ನೂ ಒಟ್ಟುಗೂಡಿಸಿ ಜ್ಞಾನಾಧಾರಿತ ಸಮಾಜವನ್ನು ರೂಪಿಸುವ ಕತೆಗಾರರ ಶ್ರಮ, ಶ್ರಮ ಮತ್ತು ಪ್ರೀತಿ ಅನನ್ಯವಾದುದು. ಹಳೆಯ ನೆನಪಿನ ಜೊತೆಗೆ ಹೊಸ ರೂಪದ ಬಗ್ಗೆ ಹಂಬಲ, ಕ್ಷುದ್ರತೆಯ ನಡುವೆ ಅರಳುವ ಮಾನವೀಯತೆ, ಬದುಕನ್ನು ವೈಚಾರಿಕ ನೆಲೆಯಿಂದ ಪರಿಭಾವಿಸುವ ಲೋಕ ದೃಷ್ಟಿ ಕರೀಗೌಡರ ಸಾಹಿತ್ಯದಲ್ಲಿ ಉಜ್ವಲವಾಗಿ ಮತ್ತು ಜೀವಂತವಾಗಿ ಮೈದಾಳಿದೆ. ಇವರ ಸ್ವಾನುಭವ ಮತ್ತು ಲೋಕಾನುಭವದಿಂದ ಮೂಡಿಬಂದಿರುವ ಸಾಹಿತ್ಯವು ಓದುಗನ ಮೇಲೆ ಅಚ್ಚಳಿಯದ ಮುದ್ರೆಯನ್ನು ಒತ್ತುತ್ತದೆ.

## ಕರೀಗೌಡರ –ಎಚ್.ಎಲ್.ನಾಗೇಗೌಡ ಕೃತಿ ವಿಶ್ಲೇಷಣೆ

ನಾಗೇಗೌಡರ ಸಾಹಿತ್ಯವನ್ನು ಮೊದಲಿನಿಂದಲೂ ಕುತೂಹಲದ ಚಕ್ಷುವಿನಿಂದ ಓದಿಕೊಂಡು ಬಂದಿರುವ ಕರೀಗೌಡ ಬೀಚನಹಳ್ಳಿಯವರು ಕೇಂದ್ರ ಸಾಹಿತ್ಯ ಅಕಾಡೆಮಿಯ 'ಭಾರತೀಯ ಸಾಹಿತ್ಯ ನಿರ್ಮಾಪಕರು' ಮಾಲೆಯಲ್ಲಿ ರಚಿಸಿರುವ 'ಹೆಚ್.ಎಲ್.ನಾಗೇಗೌಡ' ಎಂಬ ಕಿರು ಹೊತ್ತಗೆ ಗುರುತರ ಕೃತಿಯಾಗಿ ಹೊರಹೊಮ್ಮಿದೆ. ತುಂಬು ಜೀವನ ನಡೆಸಿದ ನಾಗೇಗೌಡರ ಸಹಜ ವ್ಯಕ್ತಿತ್ವವನ್ನು, ಅನುಪಮ ಆಸಕ್ತಿಯನ್ನು, ನಿಜವಾದ ಒಲವನ್ನು ಕರೀಗೌಡರು ಈ ಕೃತಿಯಲ್ಲಿ ಸೊಗಸು ಸೊಗಡುಗಳೊಂದಿಗೆ ಹೃದ್ಯವಾದ ಗದ್ಯಶೈಲಿಯಲ್ಲಿ ಚಿತ್ರಿಸಿದ್ದಾರೆ.

'ಜೀವನವನ್ನು ತುಂಬಾ ಆಳವಾಗಿ ನೋಡುವವರೇ ಮಹಾಪುರುಷರು'ಎನ್ನುವ ಮಾತಿನಂತೆ ನಡೆ ನುಡಿಯಲ್ಲಿ ಸಮನ್ವಯತೆಯನ್ನು ತಂದು ಕೊಳ್ಳುತ್ತ ಸಾಧನೆ ಮಾಡಿದವರು ನಾಡೋಜ ಹೆಚ್.ಎಲ್.ನಾಗೇಗೌಡರು. ಮನುಷ್ಯ ಒಳ್ಳೆಯ ರೀತಿಯಲ್ಲಿ ಜೀವಿಸಲು ಪೂರಕವಾಗುವ ಸಾಹಿತ್ಯ ಸಂಸ್ಕೃತಿ, ಸಂಶೋಧನೆಗೆ ತನ್ನದೇ ಆದ ಕೊಡುಗೆಯನ್ನು ನೀಡಿದ್ದಾರೆ. ಆಧುನಿಕ ಕನ್ನಡ ಸಾಹಿತ್ಯದ ಅಪರೂಪದ ಲೇಖಕರೂ, ದಕ್ಷ ಆಡಳಿತಕ್ಕೆ ಪ್ರಸಿದ್ಧರೂ, ಜನಪರ ಕಾಳಜಿಯುಳ್ಳವರಾದ ನಾಗೇಗೌಡರು ಕನ್ನಡ ಕಾದಂಬರಿ, ಭಾಷಾಂತರ, ಜೀವನ ಚರಿತ್ರೆ, ಆತ್ಮಚರಿತ್ರೆ, ಜಾನಪದ ಮುಂತಾದ ಕ್ಷೇತ್ರಗಳಲ್ಲಿ ಆರು ದಶಕಗಳಿಗೂ ಮಿಗಿಲಾದ ತಮ್ಮ ಅಮೂಲ್ಯಸೇವೆಯನ್ನು, ಮೂರ್ನಾಲ್ಕು ದಶಕಗಳಿಗೂ ಮಿಗಿಲಾಗಿ ಕತೆಗಾರರಾಗಿ, ನಾಟಕಕಾರರಾಗಿ, ಕಾದಂಬರಿಕಾರರಾಗಿ, ವಿಮರ್ಶಕರಾಗಿ, ಭಾಷಾಂತರಕಾರರಾಗಿ, ಸಂಪಾದಕರಾಗಿ ತಮ್ಮದೇ ಅನನ್ಯ ಛಾಪನ್ನು ಮೂಡಿಸಿರುವ ಕರೀಗೌಡ ಬೀಚನಹಳ್ಳಿಯವರು ನಾಗೇಗೌಡರ ವ್ಯಕ್ತಿಚಿತ್ರಣವನ್ನು ಅವರ ಸಮಗ್ರ ಸಾಹಿತ್ಯದೊಂದಿಗೆ 'ಕರಿಯನ್ನು ಕನ್ನಡಿಯಲ್ಲಿ ತೋರಿಸುವಂತೆ' ಓದುಗರ ಕುತೂಹಲವನ್ನು ಕೆರಳಿಸುವಂತೆ ಪಡಿಮೂಡಿಸಿದ್ದಾರೆ.

ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಯಾವುದೇ ಪ್ರಸಿದ್ದ ವ್ಯಕ್ತಿಯ ಬದುಕು-ಬರಹದ ಸಂಪೂರ್ಣ ವಿವರ ನೀಡುವ ಕೃತಿಗಳು ಅತಿವಿರಳ. ಆದರೆ ಕರೀಗೌಡರ 'ಹೆಚ್.ಎಲ್.ನಾಗೇಗೌಡ' ಎಂಬ ಕೃತಿ ಮೇಲಿನ ಹೇಳಿಕೆಗೆ ಹೊರತಾಗಿದೆ. ಕರೀಗೌಡರು ಅತ್ಯಂತ ಉತ್ಸಾಹದಿಂದ ಅದಮ್ಯ ಆತ್ಮವಿಶ್ವಾಸದಿಂದ ಬರೆಯತೊಡಗಿರುವ ಈ ಕಿರು ಹೊತ್ತಗೆಯಲ್ಲಿ ಹೆಚ್.ಎಲ್.ನಾಗೇಗೌಡರ ಜೀವನ, ನಾಗೇಗೌಡರ ಕಾದಂಬರಿಗಳು, ಕವನ ಸಂಕಲನಗಳು, ಕಥೆಗಳು ಮತ್ತು ಪ್ರಬಂಧಗಳು, ಸಂಗ್ರಹಾನುವಾದಗಳು, ಜೀವನ ಚರಿತ್ರೆಗಳು, ವೈಜ್ಞಾನಿಕ ಕಥನ, ಪ್ರವಾಸಿ ಕಂಡ ಇಂಡಿಯಾ ಸಂಪುಟಗಳ ಭಾಷಾಂತರ, ಕನ್ನಡ ಜಾನಪದ ನಿಘಂಟು, ಜಾನಪದ ಸಂಗ್ರಹಗಳು, ಆತ್ಮ ಚರಿತ್ರೆಯ ಸಂಪುಟಗಳು, ಅಭಿನಂದನಾ ಗ್ರಂಥಗಳು, ಸಂಪಾದಿತ ಕೃತಿಗಳು, ಮಕ್ಕಳ ಮನಸ್ಸಿನಲ್ಲಿ ತಂದೆ, ವಿದ್ವಾಂಸರ ಕಣ್ಣಿನಲ್ಲಿ ನಾಗೇಗೌಡರ ಸಾಹಿತ್ಯ ಎಂಬ ಹದಿನೈದು ಅಧ್ಯಾಯಗಳಿವೆ. ಬದುಕಿನಲ್ಲಿ ಅತ್ಯುತ್ತಮ ಸಾಧನೆ ಮಾಡಿದವರನ್ನು ಯಾವುದೇ ತರತಮಗೈಯದೆ ಸಾಧಕರೊಬ್ಬರ ಅನನ್ಯ ಸಾಧನೆಯನ್ನು ಮನುಷ್ಯತ್ವ ಎದ್ದು ಕಾಣುವಂತೆ, ಸಾರ್ಥಕ ಅಭಿವ್ಯಕ್ತಿಯ ಜೊತೆಜೊತೆಗೆ ಚೊಕ್ಕವಾಗಿ ಹಿತಮಿತವೆನಿಸುವಂತೆ, ಓದುಗರ ಮನಸ್ಸಿಗೆ ನಾಟುವಂತೆ ಬರೆಯುವ ಕರೀಗೌಡರ ಕ್ರಿಯಾಶೀಲತೆ ಮತ್ತು ಸೃಜನಶೀಲತೆ ಅನಾವರಣಗೊಂಡಿದೆ.

ಕರೀಗೌಡರು ಮೊದಲಿನಿಂದಲೂ ಹಿರಿದು ಕಿರಿದುಗಳೆರಡನ್ನೂ ಸಮಚಿತ್ತದಿಂದ ನೋಡುವ ಗೌರವ ಗುಣದಿಂದಾಗಿ ಎಲ್ಲರಿಂದಲೂ ಆಕರ್ಷಿತರಾಗಿದ್ದಾರೆ. ಸಾಹಿತ್ಯ ಸಂರಚನೆಗೆ ಬೇಕಾದ ಸಂಯಮದ ಜೊತೆಗೆ ಅಧ್ಯಯನ, ಅಧ್ಯಾಪನ, ಸಂಶೋಧನೆಯ ಶಿಸ್ತಿನೊಂದಿಗೆ ಆಡಳಿತಾನುಭವವೂ ಮಿಳಿತಗೊಂಡು ಸೃಜನಶೀಲತೆಯ ಎಲ್ಲಾ ಸಾಧ್ಯತೆಗಳನ್ನು ಅಚ್ಚುಕಟ್ಟಾಗಿ ಅವರ ಇನ್ನಿತರ ಕೃತಿಗಳಂತೆಯೇ ದುಡಿಸಿಕೊಂಡಿದ್ದಾರೆಂಬುದು ಈ ಕೃತಿಯನ್ನು ಓದಿದವರಿಗೆ ಮನವರಿಕೆಯಾಗದಿರದು.

'ಎಚ್.ಎಲ್. ನಾಗೇಗೌಡ' ಕೃತಿಯನ್ನು ಕರೀಗೌಡರು ನಿರೂಪಿಸಿರುವ ವಿಧಾನವೇ ಅತ್ಯಂತ ಸೊಗಸಾಗಿದೆ. ಬರೀ ವಿವರಗಳಿಗೆ ಮಹತ್ವ ನೀಡದೆ ಕಲಾತ್ಮಕ ನಿರೂಪಣೆಯಿಂದಾಗಿ ಓದಿಸಿಕೊಂಡು ಹೋಗುವ ಗುಣವನ್ನು ಹೊಂದಿರುವುದು ಈ ಕಿರುಹೊತ್ತಗೆಯ ಮತ್ತೊಂದು ವೈಶಿಷ್ಟ್ಯವಾಗಿದೆ. ಜೀವಂತ ಮಾದರಿಯಾಗುವಂತೆ ವ್ಯಕ್ತಿಯೊಬ್ಬನ ವೈಯಕ್ತಿಕ ಬದುಕಿನ ಪದರುಗಳೊಂದಿಗೆ ವಿಶಿಷ್ಟ ಸಾಧನೆಯನ್ನು ತನ್ನ ಸತತ ಪರಿಶ್ರಮದಿಂದ, ಪ್ರತಿಭೆಯಿಂದ ಮತ್ತು ಬುದ್ದಿವಂತಿಕೆಯಿಂದ ಸಾಹಿತ್ಯ ಸತ್ವವನ್ನು ಸಾಹಿತ್ಯ ಚರಿತ್ರೆಯ ಸತ್ಯದೊಂದಿಗೆ ಸಮರಸಗೊಳಿಸಿ ವಿಶ್ಲೇಷಿಸಿದ್ದಾರೆ.

ಕರೀಗೌಡರು ಹಂತ ಹಂತವಾಗಿಯೇ ವಸ್ತುವನ್ನು ನಿರೂಪಿಸುತ್ತಾ ಅವಶ್ಯಕವೆನ್ನುವಲ್ಲಿ ಸ್ವಾರಸ್ಯಕರ ಘಟನೆಗಳನ್ನು ಬೆಸೆಯುತ್ತ ಸಾಗಿರುವ ಕೃತಿಕಾರರ ಜಾಣ್ಮೆ ಮೆಚ್ಚುವಂತದ್ದು. ಅಲ್ಲದೆ ಪ್ರತಿಯೊಂದು ಹಂತದ ನಿರೂಪಣೆಗೂ ಪ್ರತ್ಯೇಕವಾದ 'ಶಿರೋನಾಮೆ'ಯನ್ನು ಬಳಸಿರುವುದು ಕೃತಿಯ ಬಂಧವನ್ನು ಹೆಚ್ಚಿಸಿದೆ. ವ್ಯಕ್ತಿ ವಿಶ್ಲೇಷಣೆ ಮಾಡುತ್ತಲೇ ಕೃತಿಯು ವಿಮರ್ಶನ ಚತುರತೆಯ ನೆಲೆಯನ್ನು ಪಡೆದುಕೊಂಡು ಉನ್ನತವಾಗಿದೆ ಎನಿಸುತ್ತದೆ.

ಬರಹದಿಂದ ಉಂಟಾಗುವ ಸಾಫಲ್ಯವೇ ಎಲ್ಲರ ನಿರೀಕ್ಷೆಯಾಗಿರುತ್ತದೆ. ಸೃಜನಶೀಲತೆಯ ಕಲೆಯನ್ನು ರೂಢಿಸಿಕೊಂಡ ವ್ಯಕ್ತಿಯು ಏನೆಲ್ಲ ಬರವಣಿಗೆ ಮಾಡುತ್ತಾ ಹೋದಂತೆ ಅದಕ್ಕೊಂದು ಸಾಕಾರಗೊಳಿಸುವ ಪ್ರಯತ್ನಕ್ಕೆ ಕೈ ಹಾಕುತ್ತಾನೆ. ಅಂತಹ ಬರಹವು ಬೋಧಪ್ರದವೋ, ಆದರ್ಶ ಮಾದರಿಯದೋ, ಮೌಲ್ಯ ನಿರೂಪಣೆಯ ನೆಲೆಯಿಂದಲೋ ಅಭಿವ್ಯಕ್ತವಾಗುತ್ತದೆ. ಯಾರೊಬ್ಬರ ಬದುಕಿನ ವಿವರಗಳು ಅವರದ್ದೇ ಆದರೂ ಅವುಗಳು ತಮ್ಮ ಜೀವನಕ್ಕೇ ಸಂಬಂಧಿಸಿದಂತವು ಎನ್ನುವಂತೆ ತನ್ಮಯೀ ಭಾವದಿಂದ ಕಟ್ಟುವ ಮತ್ತು ನೋಡುವ ಕಲೆಗಾರಿಕೆ ಕರೀಗೌಡರಿಗೆ ಸಿದ್ಧಿಸಿರುವುದು ಅವರ ಸೃಜನಶೀಲತೆಗೆ ಸಾಕ್ಷಿಪ್ರಜ್ಞೆಯಾಗಿ ನಿಲ್ಲುತ್ತದೆ ಈ ಕೃತಿ. ನಾಗೇಗೌಡರ ಜೀವನದ ಘಟನೆಗಳನ್ನು ಕ್ರಮವೊಂದಕ್ಕೆ ಅನ್ವಯಿಸಿ ಹೇಳುವ ಕರೀಗೌಡರ ಅನನ್ಯತೆಯೂ ಪ್ರಕಟವಾಗಿದೆ. ವಸ್ತುನಿಷ್ಠತೆಯೊಂದಿಗೆ ಹರಳುಗಟ್ಟಿರುವ ಈ ಕೃತಿ ಯಾವುದೇ ಪೂರ್ವಗ್ರಹಗಳಿಗೆ ಒಳಗಾಗದೆಯೂ ರಚಿತವಾಗಿರುವುದು ಓದುಗರ ಮನಸ್ಸಿಗೆ ಮುದ ನೀಡುತ್ತದೆ.

ಕರೀಗೌಡರು ರಚಿಸಿರುವ ಈ ಕಿರುಹೊತ್ತಗೆ 'ಎಚ್.ಎಲ್.ನಾಗೇಗೌಡ' ವ್ಯಕ್ತಿ ಚಿತ್ರಣ ಮಾತ್ರವಾಗಿರದೆ ಒಂದು ವಿಮರ್ಶಾ ಕೃತಿಯೂ ಹೌದು. ಏಕೆಂದರೆ ಕರೀಗೌಡರು ಓರ್ವ ವಿಮರ್ಶಕರೂ ಆಗಿರುವುದು. ಕರೀಗೌಡರಲ್ಲಿರುವ ವಿಮರ್ಶನಾ ಪ್ರಜ್ಞೆ ಇಲ್ಲಿ ಇಡುಕಿರಿದಿದೆ. ನಾಗೇಗೇಗೌಡರ ಒಟ್ಟು ಜೀವನ ಚಿತ್ರಣದ ನಂತರ ಕೃತಿಯಲ್ಲಿ ದೊಡ್ಡಮನೆ, ಸೊನ್ನಯಿಂದ ಸೊನ್ನೆಗೆ, ಭೂಮಿಗೆ ಬಂದ ಗಂಧರ್ವ ಕಾದಂಬರಿಗಳನ್ನು ವಿಶ್ಲೇಷಣೆ ಮಾಡಲಾಗಿದೆ. ನಾನಾಗುವೆ ಗೀಜಗನ ಹಕ್ಕಿ, ಕಥೆ-ವ್ಯಥೆ ಎಂಬೆರಡು ಕವನಸಂಕಲನಗಳ ವಸ್ತುವಿನ್ಯಾಸವನ್ನು ವಿವರಿಸಿದ್ದಾರೆ ಕರೀಗೌಡರು. ಕಂಡು ಕೇಳಿದ ಕಥೆಗಳು, ಖೈದಿಗಳ ಕಥೆಗಳು ಎಮಬ ಕಥಾ ಸಂಕಲನಗಳು ನನ್ನೂರು ಎಂಬ ಪ್ರಬಂಧ ಸಂಕಲನದ ವಿಚಾರ ಶೀಲತೆ, ಕೆನಿಲ್ ವರ್ತ, ಮಾರ್ಕೋ ಪೋಲೋ ಎಂಬ ಸಂಗ್ರಹಾನುವಾದ, ಅಪರೂಪದ ಪ್ರವಾಸ ಕಥನಗಳ ಮಂಥನ, ಸರೋಜಿನಿ ನಾಯ್ಡು, ವೆರಿಯರ್ ಎಲ್ವಿನ್ನರ ಗಿರಿಜನ ಪ್ರಪಂಚ ಎಂಬ ಕೃತಿಗಳ ತಲಸ್ಪರ್ಶಿ ಅಧ್ಯಯನ ವೈಜ್ಞಾನಿಕಕಥನಗಳಾದ ಬೆಟ್ಟದಿಂದ ಬಟ್ಟಲಿಗೆ (ಕಾಫಿಯ ಕಥೆ) ಕುರಿತ ಆಲೋಚನೆ, ಭಾಷಿಕ ಸೌಷ್ಠವ, ಸಂಗ್ರಹ ಗುಣ ಓದುಗರನ್ನು ಮನಸೆಳೆಯುವಂತೆ ಮಾಡಿದೆ.

ನಾಗೇಗೌಡರು ಇಂಗ್ಲಿಷಿನಿಂದ ಕನ್ನಡಕ್ಕೆ ಅನುವಾದಿಸಿರುವ ಅಭೂತಪೂರ್ವವೆನಿಸಿರುವ ಎಂಟು ಕೈದೀವಿಗೆಗಳಾದ 'ಪ್ರವಾಸಿ ಕಂಡ ಇಂಡಿಯಾ' ಎಂಟು ಸಂಪುಟಗಳನ್ನು ಸಂಕ್ಷಿಪ್ತವಾಗಿ ಪರಿಣಾಮಕಾರಿಯಾಗಿ ಪರಿಚಯ ಮಾಡಿಕೊಟ್ಟಿದ್ದಾರೆ. ಕನ್ನಡದ ಮೊದಲ ಜಾನಪದ ನಿಘಂಟು ಎನಿಸಿರುವ ನಾಗೇಗೌಡರು ರಚಿಸಿರುವ 'ಕನ್ನಡ ಜಾನಪದ ನಿಘಂಟು' ಪರಿಚಯ, ಜಾಣಪದ ಸಂಗ್ರಹಗಳಾದ ಸೋಬಾಬೆ ಚಿಕ್ಕಮ್ಮನ ಪದಗಳು, ಕರ್ನಾಟಕ ಜಾನಪದ ಕಥೆಗಳು, ಪದವವೆ ನಮ್ಮ ಎದೆಯಲ್ಲಿ, ಹೆಳವರು ಮತ್ತು ಅವರ ಕಾವ್ಯಗಳು, ಸಿರಿಚುಂಚನಗಿರಿ, ಕನ್ನಡ ಜನಪದ ಕಥನ ಕಾವ್ಯಗಳು, ಚಾರಿತ್ರಕ ಜಾನಪದ ಕಥನ ಕಾವ್ಯಗಳು, ಕಾಳಿಂಗರಾಯ ಕೃತಿಗಳು ಜಾನಪದವೇ ತಾಯಿ ಎಂದು ಭಾವಿಸಿ ರಚಿಸಿದ ಕೃತಿಗಳನ್ನು ಮನಮುಟ್ಟುವಂತೆ ಕರೀಗೌಡರು ವಿಮರ್ಶಾತ್ಮಕವಾಗಿ ವಿವರಿಸಿದ್ದಾರೆ.

ನಾಗೇಗೌಡರ ಸಮಗ್ರ ಬದುಕನ್ನು ಚಿತ್ರಿಸುವಾಗ ಅವರು ರಚಿಸಿರುವ ಆತ್ಮಚರಿತ್ರೆ ಸಂಪುಟಗಳಾದ ಜೀವನ ಯಾತ್ರೆ, ನಾ ಕಂಡ ಪ್ರಪಂಚ, ಚುನಾವಣಾ ಯಾತ್ರೆ, ಜಾನಪದ ಯಾತ್ರೆಗಳು ಕನ್ನಡ ನಾಡಿನ ಸಾಂಸ್ಕೃತಿಕ ಚರಿತ್ರೆಯ ಕೋಶಗಳಂತಿರುವುದನ್ನು ಕರೀಗೌಡರು ವಿಶಿಷ್ಟವಾಗಿಯೇ ದರ್ಶಿಸಿ ದಾಖಲಿಸಿದ್ದಾರೆ. ಅಲ್ಲದೆ ನಾಗೇಗೌಡರ ಅಭಿನಂಧನಾ ಗ್ರಂಥಗಳಾದ 'ನಾಗವಲ್ಲಿ, ನಾಗಸಂಪಿಗೆ, ನಾಗಪಥ ಇವುಗಳನ್ನು ಕನ್ನಡ ಸಾಹಿತ್ಯ, ಜಾನಪದ ಮತ್ತು ಕನ್ನಡ ಸಂಸ್ಕೃತಿಯ ಬಗ್ಗೆ ಅಧ್ಯಯನಿಸುವಂತೆ ಕರೀಗೌಡರು ಆಮೂಲಾಗ್ರವಾಗಿ ಓದಿ ಪರಿಚಯಿಸಿದ್ದಾರೆಂದು ಮನದಟ್ಟಾಗುತ್ತದೆ.

'ನಾಗಸಂಪದ, ಎಚ್.ಎಲ್.ನಾಗೇಗೌಡ ದಿ ಮ್ಯಾನ್ ಅಂಡ್ ಹಿಸ್ ಮಿಷನ್' ಪರಿಚಯಾತ್ಮಕವಾದರೂ ಅಲ್ಲಿಯೂ ಕರೀಗೌಡರ ಸಂಗ್ರಹ ಗುಣ ಉತ್ತಮವೆನಿಸಿದೆ. ಇಷ್ಟೇ ಅಲ್ಲದೆ ಮಕ್ಕಳ ಮನಸ್ಸಿನಲ್ಲಿ ತಂದೆ, ವಿದ್ವಾಂಸರ ಕಣ್ಣಿನಲ್ಲಿ ನಾಗೇಗೌಡರ ಸಾಹಿತ್ಯ ಎಂಬ ಅಧ್ಯಾಯಗಳಲ್ಲಿ

ಕನ್ನಡ ನಾಡಿನ ಜನರು ನಾಗೇಗೌಡರ ಬಗ್ಗೆ ತಳೆಯಬಹುದಾದ ಅಪೂರ್ವವಾದ ಗೌರವಕ್ಕೆ ಪಾತ್ರರಾಗುವಂತೆ ಕರೀಗೌಡರು ವಿಭಿನ್ನವಾಗಿಯೇ ಸಮಂಜಸವಾಗಿಯೇ ಈ ಕಿರು ಹೊತ್ತಗೆಯನ್ನು ಗದ್ಯವಾದರೂ ರಸಭಂಗವಾದಂತೆ ರಚಿಸಿದ್ದಾರೆ. ನಾಡೋಜ ಎಚ್.ಎಲ್.ನಾಗೇಗೌಡರ ತೊಂಬತ್ತು ವರ್ಷಗಳ ಬದುಕನ್ನು, ಬಾಳಿನುದ್ದಕ್ಕೂ ಮಾಡಿದ ಅನನ್ಯ ಸಾಧನೆಯನ್ನು ತೊಂಭತ್ತು ಪುಟಗಳಲ್ಲಿ ಭಾರತೀಯ ಸಾಹಿತ್ಯ ನಿರ್ಮಾಪಕರ ಸಾಲಿನಲ್ಲಿ ನಿಲ್ಲುವಂತೆ ಮಾಡುವಲ್ಲಿ ಕರೀಗೌಡರು ಯಶಸ್ವಿಯಾಗಿದ್ದಾರೆ.

**ಉಪಸಂಹಾರ/ಕೊನೆಯ ಮಾತು**

ಅಪರೂಪದ ಜೀವನಾನುಭವಗಳೇ ಹರಳುಗಟ್ಟಿದಂತೆ ಸೃಜಿಸಲಾದ ನಾಗೇಗೌಡರ ಕೃತಿಗಳನ್ನು ತಲಸ್ಪರ್ಶಿಯಾಗಿ ಅಧ್ಯಯನಿಸಿರುವ ಕರೀಗೌಡರು ನಾಗೇಗೌಡರ ಸಾಹಿತ್ಯಕ ಅಂತಸ್ಸತ್ವವನ್ನು ಅಂತರ್ಮುಖೀ ನೆಲೆಯಿಂದ ನೋಡಿದ್ದಾರೆಂದರೆ ಅತಿಶಯೋಕ್ತಿಯಾಗಲಾರದು. ನಾಗೇಗೌಡರ ಜೀವನ ಎಂಬುದೇ ಸಾಂಸ್ಕೃತಿಕ ಸಂಕಥನ ಮಾತ್ರವಲ್ಲ ಅದೊಂದು ಜಾನಪದ ಇತಿಹಾಸ ಮತ್ತು ಸಂಸ್ಕೃತಿ ಚರಿತೆಯಾಗಿದೆ. ಭೌತಿಕ ಶುಭ್ರತೆ, ಸರಳತೆ ಮತ್ತು ಬೌದ್ಧಿಕ ಸೌಂದರ್ಯದಿಂದ ಆಕರ್ಷಿತರಾಗಿದ್ದ ನಾಗೇಗೌಡರ ಮನೋಜ್ಞವಾದ ವಿಶ್ಲೇಷಣೆಯೊಂದಿಗೆ ವಸ್ತು ನಿಷ್ಠ ಗ್ರಹಿಕೆ, ಆಳವಾದ ಸೂಕ್ಷ್ಮ ಚಿಂತನೆಗಳು, ನಿರ್ದಿಷ್ಟ ಕಾಲಘಟ್ಟದ ಅಧ್ಯಯನ ಸಾಮಾಗ್ರಿಯಾಗುವಂತೆ ಕರ್ನಾಟಕ ಸಂಸ್ಕೃತಿಯ ಸ್ವರೂಪ ಅರಿಯುವ ಆಕರ ಕೃತಿಯಾಗುವಂತೆ ಚಿತ್ರಿಸಿದ್ದಾರೆ. ಒಟ್ಟಾರೆ ಓರ್ವ ಸಾಧಕರ ಜೀವನವನ್ನು ಆರಾಧನಾ ಮನೋಭಾವದಿಂದ ಮತ್ತೋರ್ವ ಸಾಧಕರು ಕೃತಿಯನ್ನು ಕಟ್ಟಿಕೊಟ್ಟಿರುವುದು ಅತ್ಯಂತ ಅಧಿಕೃತವಲ್ಲವೇ?...